ಕಾರಣವಾಗುತ್ತದೆ. ಕೀಲು ಮತ್ತು ಚರ್ಮದಲ್ಲಿ ಊತ, ನೋವು, ಕೆಂಪಾಗುವಿಕೆ, ಉರಿ ಮೊದಲಾದವು ಸಾಮಾನ್ಯ ಲಕ್ಷಣಗಳು. ಆಂತರಿಕ ಅಂಗಾಂಗಳಾದ ಹೃದಯ, ಶ್ವಾಸಕೋಶ ಮತ್ತು ಮೂತ್ರಪಿಂಡಗಳಲ್ಲಿ ಉರಿಯೂತ ಆರಂಭವಾದಾಗ ಒಮ್ಮೊಮ್ಮೆ ಗಂಭೀರ ಸ್ವರೂಪದ ಗುಣಲಕ್ಷಣಗಳೂ ಕಾಣಿಸಿಕೊಳ್ಳಬಹುದು.

ಈ ಕಾಯಿಲೆಗಳ ಚಿಕಿತ್ಸೆ ನಿಜಕ್ಕೂ ಸವಾಲು. ತಜ್ಞ ವೈದ್ಯರು ಮುಖ್ಯವಾಗಿ ಉರಿಯೂತವನ್ನು ನಿಯಂತ್ರಿಸಲು ಉರಿಯೂತ ಪ್ರತಿರೋಧಿ ಔಷಧಗಳನ್ನು (ಆ್ಯಂಟಿ ಇನ್‌ಫ್ಲಮೇಟರಿ ಡ್ರಗ್ಸ್) ಸೂಚಿಸುತ್ತಾರೆ. ಇವುಗಳಲ್ಲಿ ಮುಖ್ಯವಾದುವು ನಾನ್ ಸ್ಟೀರಾಯ್ಡಲ್ ಆ್ಯಂಟಿ ಇನ್‌ಫ್ಲಮೇಟರಿ ಡ್ರಗ್ಸ್ ಮತ್ತು ಸ್ಟೀರಾಯ್ಡ್ ಔಷಧಗಳು. ಆದರೆ ರೋಗಲಕ್ಷಣಗಳನ್ನು ಮತ್ತು ಉರಿಯೂತವನ್ನು ನಿಯಂತ್ರಿಸುವ ಸ್ಟೀರಾಯ್ಡ್ ಔಷಧಗಳ ದೀರ್ಘಕಾಲಿಕ ಬಳಕೆ ಹಲವು ಅಡ್ಡ ಪರಿಣಾಮಗಳಿಗೆ ಕಾರಣವಾಗಬಹುದು.

ಇದರ ಜೊತೆಯಲ್ಲಿಯೇ ರೋಗನಿರೋಧಕ ವ್ಯವಸ್ಥೆಯ ಕಾರ್ಯವೈಖರಿಯಲ್ಲಿ ಕೊಂಚ ಬದಲಾವಣೆಗಳನ್ನು ತರುವ (ಇಮ್ಯೂನೊ ಮಾಡ್ಯುಲೇಟರಿ ಡ್ರಗ್ಸ್) ಅಥವಾ ಅದರ ಕಾರ್ಯಕ್ಷಮತೆಯನ್ನು ತಗ್ಗಿಸುವ ಔಷಧಗಳು (ಇಮ್ಯೂನೊ ಸಪ್ರೆಸೆಂಟ್ಸ್) ಉರಿಯೂತವನ್ನು ಕಡಿಮೆ ಮಾಡಬಹುದು. ಆದರೆ ಈ ಬಗೆಯ ಔಷಧಗಳ ಬಳಕೆ ಕ್ರಮೇಣ ರೋಗ ನಿರೋಧಕ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಾ ಹೋಗುವುದು ದಿಟ. ರೋಗ ನಿರೋಧಕ ವ್ಯವಸ್ಥೆ ದುರ್ಬಲವಾದಂತೆ ವ್ಯಕ್ತಿ ವಿವಿಧ ಸೋಂಕುಗಳಿಗೆ ಮತ್ತು ಇತರ ಕಾಯಿಲೆಗಳಿಗೆ ಸುಲಭವಾಗಿ ತುತ್ತಾಗುತ್ತಾನೆ. ಹೀಗೆ ಚಿಕಿತ್ಸೆಗೆ ಸವಾಲನ್ನೊಗೆಯುವ ಈ ಕಾಯಿಲೆಗಳ ನಿಯಂತ್ರಣಕ್ಕಾಗಿ ಇತ್ತೀಚೆಗೆ ಜೈವಿಕ ಉತ್ಪನ್ನಗಳ ಬಳಕೆ ಹೆಚ್ಚು ಪ್ರಚಲಿತವಾಗುತ್ತಿದೆ. ಮಾನವ ಜೀವಕೋಶಗಳನ್ನು ಅಥವಾ ಇತರ ಸೂಕ್ಷ್ಮಜೀವಿಗಳನ್ನು ಕೃತಕವಾಗಿ ಬೆಳೆಸಿ ಅವು ಉತ್ಪಾದಿಸುವ ಉಪಯುಕ್ತ ಅಂಶಗಳನ್ನು ಸಂಸ್ಕರಿಸಿ ಸಿದ್ಧಪಡಿಸುವ ಈ ಜೈವಿಕ ಚಿಕಿತ್ಸೆ ಆಟೊ ಇಮ್ಯೂನ್ ಕಾಯಿಲೆಗಳಿಂದ ಬಳಲುವ ವ್ಯಕ್ತಿಗೆ ಆಶಾಕಿರಣವಾಗಬಹುದು. ಈ ಉತ್ಪನ್ನಗಳು ವ್ಯವಸ್ಥೆಯ ಮುಖ್ಯ ಭಾಗವಾದ ಟಿ ಮತ್ತು ಬಿ ಜೀವಕೋಶಗಳ ಸಹಜ ಕಾರ್ಯಗಳಿಗೆ ತಡೆಯೊಡ್ಡುತ್ತವೆ. ಇದರಿಂದ ಪ್ರತಿಕಾಯಗಳ ಉತ್ಪನ್ನ ಹಾಗೂ ಉರಿಯೂತ ಎರಡೂ ಕಡಿಮೆಯಾಗುತ್ತವೆ. ಅನೇಕ ಬಗೆಯ ಜೈವಿಕ ಉತ್ಪನ್ನಗಳು ಲಭ್ಯವಿದ್ದು ಪ್ರತಿಯೊಂದೂ ರೋಗನಿರೋಧಕ ವ್ಯವಸ್ಥೆಯ ಬೇರೆ ಬೇರೆ ಭಾಗಗಳ ಕಾರ್ಯಗಳಲ್ಲಿ ವ್ಯತ್ಯಾಸ ಉಂಟು ಮಾಡುತ್ತದೆ.

### ಜೈವಿಕ ಚಿಕಿತ್ಸೆ – ಎಚ್ಚರಿಕೆಗಳೇನು?

ರೋಗನಿರೋಧಕ ವ್ಯವಸ್ಥೆಯ ವಿವಿಧ ಭಾಗಗಳ ಕಾರ್ಯಕ್ಷಮತೆಯನ್ನು ಪರಿಷ್ಕರಿಸುವ ಈ ಚಿಕಿತ್ಸೆಯನ್ನು ಆರಂಭಿಸುವ ಮೊದಲು ವ್ಯಕ್ತಿಯನ್ನು ಕೆಲವು ತಪಾಸಣೆಗಳಿಗೆ ಒಳಪಡಿಸಬೇಕು. ವ್ಯಕ್ತಿ ಕ್ಷಯರೋಗ, ಹೆಪಟೈಟಿಸ್ ಬಿ ಮತ್ತು ಸಿ ವೈರಾಣುಗಳ ಸೋಂಕು, ಯಾವುದೇ ಕ್ಯಾನ್ಸರ್, ನರವ್ಯೂಹಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿಲ್ಲ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಈ ಉತ್ಪನ್ನಗಳನ್ನು ಸಾಮಾನ್ಯವಾಗಿ ಚುಚ್ಚುಮದ್ದುಗಳ ರೂಪದಲ್ಲಿಯೇ ಕೊಡಬೇಕಾಗಿರುವುದರಿಂದ ಮತ್ತು ಆ ವೇಳೆಯಲ್ಲಿ ಕೆಲವೊಮ್ಮೆ ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳುವ ಸಾಧ್ಯತೆಗಳಿರುವುದರಿಂದ ವೈದ್ಯರ ಅಥವಾ ಶುಶ್ರೂಷಕರ ಮೇಲ್ವಿಚಾರಣೆಯಲ್ಲಿಯೇ ಚುಚ್ಚುಮದ್ದನ್ನು ಕೊಡುವುದು ಸೂಕ್ತ. ವ್ಯಕ್ತಿಗೆ ಯಾವುದೇ ಅಹಿತಕರ ಅನುಭವವಾದರೂ ಕೂಡಲೇ ಚುಚ್ಚುಮದ್ದನ್ನು ನಿಲ್ಲಿಸಬೇಕಾಗಬಹುದು ಅಥವಾ ಪ್ರಮಾಣವನ್ನು ಕಡಿಮೆ ಮಾಡಬೇಕಾಗಬಹುದು. ಕೆಲವು ವ್ಯಕ್ತಿಗಳಲ್ಲಿ ಚುಚ್ಚುಮದ್ದನ್ನು ಸ್ವೀಕರಿಸುವಾಗ ಮತ್ತು ಸ್ವಲ್ಪ ಸಮಯದ ನಂತರ ಜ್ವರ, ಆಯಾಸ, ವಾಕರಿಕೆ, ವಾಂತಿ, ರಕ್ತದೊತ್ತಡ ಕಡಿಮೆಯಾಗುವುದು, ಹಸಿವು ಕಡಿಮೆಯಾಗುವುದು, ದದ್ದುಗಳು ಮೊದಲಾದ ಅಡ್ಡಪರಿಣಾಮಗಳು ಸಾಮಾನ್ಯ. ಆದ್ದರಿಂದಲೇ ವೈದ್ಯರ ಮೇಲ್ವಿಚಾರಣೆ ಅತ್ಯಗತ್ಯ.

ಚುಚ್ಚುಮದ್ದಿನ ರೂಪದ ಔಷಧವಾದ್ದರಿಂದ, ಕೂಡಲೇ ರಕ್ತಪರಿಚಲನೆಯಲ್ಲಿ ಸೇರಿ ವ್ಯಕ್ತಿಯ ನೋವು ಮತ್ತು ಇತರ ಗುಣಲಕ್ಷಣಗಳು ಕೂಡಲೇ ಕಡಿಮೆಯಾಗುತ್ತವೆ. ಆದ್ದರಿಂದ ಸಾಮಾನ್ಯ ಚಿಕಿತ್ಸೆಗೆ ಸ್ಪಂದಿಸದ ಆಟೊ ಇಮ್ಯೂನ್ ಕಾಯಿಲೆಗಳ ಲಕ್ಷಣಗಳನ್ನು ತಕ್ಷಣ ನಿಯಂತ್ರಿಸಲು ಈ ಜೈವಿಕ ಚಿಕಿತ್ಸೆ ಪರಿಣಾಮಕಾರಿಯಾಗಬಲ್ಲದು. ಆದರೆ ಇದರ ತಯಾರಿ ಸಂಕೀರ್ಣವಾಗಿರುವುದರಿಂದ ಇದು ತುಸು ದುಬಾರಿ ಎಂದೇ ಹೇಳಬಹುದು.

ಅಲ್ಲದೆ, ರೋಗನಿರೋಧಕ ವ್ಯವಸ್ಥೆ ಕಾರ್ಯಗಳಲ್ಲಿ ಗಂಭೀರ ಬದಲಾವಣೆಗೆ ಕಾರಣವಾಗುವ ಈ ಚಿಕಿತ್ಸೆ ದೀರ್ಘಕಾಲಿಕ ಅಡ್ಡ ಪರಿಣಾಮಗಳಿಗೂ ಕಾರಣವಾಗಬಹುದು. ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳು, ವಿವಿಧ ಬಗೆಯ ಸೋಂಕುಗಳು ಮೊದಲಾದುವು ವ್ಯಕ್ತಿಯನ್ನು ಈ ಬಗೆಯ ಚಿಕಿತ್ಸೆಯನ್ನು ಮುಂದುವರೆಸದಂತೆ ತಡೆಯಬಹುದು. ಚಿಕಿತ್ಸೆಯ ಅವಧಿಯಲ್ಲಿ ತಜ್ಞರ ಆದೇಶದಂತೆ ಕೆಲವು ರಕ್ತ ತಪಾಸಣೆಗಳನ್ನು ಮಾಡಿಸಿಕೊಳ್ಳುವುದು ಮುಖ್ಯ.

ದೈನಂದಿನ ಜೀವನಶೈಲಿಯಲ್ಲಿನ ಸಣ್ಣಪುಟ್ಟ ಬದಲಾವಣೆಗಳೂ ಈ ಕಾಯಿಲೆಗಳ ನಿಯಂತ್ರಣದಲ್ಲಿ ಸ್ವಲ್ಪಮಟ್ಟಿಗೆ ನೆರವಾಗಬಹುದು. ನಿಯಮಿತ ನಡಿಗೆ ಅಥವಾ ಸರಳ ವ್ಯಾಯಾಮಗಳು, ನೈಸರ್ಗಿಕ ಆಹಾರ ಪದಾರ್ಥಗಳ ಬಳಕೆ, ಸಂಸ್ಕರಿಸಿದ ಆಹಾರಗಳಿಂದ ಆದಷ್ಟು ದೂರವಿರುವುದು ಮೊದಲಾದ ಅಭ್ಯಾಸಗಳು ರೋಗಲಕ್ಷಣಗಳನ್ನು ನಿಯಂತ್ರಿಸಲು ಸಹಕಾರಿ. ಕೀಲುಗಳನ್ನು ಸದಾ ಚಲನೆಯಲ್ಲಿಡಲು ಚಿಕಿತ್ಸೆಯ ಜೊತೆಯಲ್ಲಿ ನಿಯಮಿತ ಫಿಸಿಯೊಥೆರಪಿಯ ಪಾತ್ರ ಕೂಡ ಮಹತ್ವದ್ದೇ. ■

## ಕೆಲವು ಆಟೊ ಇಮ್ಯೂನ್ ಕಾಯಿಲೆಗಳು



### ರುಮಟಾಯ್ಡ್ ಆರ್ಥ್ರೈಟಿಸ್

ಕೈ ಮತ್ತು ಪಾದಗಳ ಸಣ್ಣ ಕೀಲುಗಳಲ್ಲಿ ಊತ ಮತ್ತು ನೋವು. ಸ್ವಲ್ಪ ಸಮಯದ ವಿಶ್ರಾಂತಿಯ ನಂತರ (ಉದಾಹರಣೆಗೆ ಬೆಳಿಗ್ಗೆ ಎದ್ದಕೂಡಲೇ) ಈ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಎರಡೂ ಕೈ ಮತ್ತು ಪಾದಗಳಲ್ಲಿ ಲಕ್ಷಣಗಳು ಸಮನಾಗಿರುತ್ತವೆ.

### ಆ್ಯಂಕಿಲೋಸಿಂಗ್ ಸ್ಪಾಂಡಿಲೈಟಿಸ್

ಕೆಳ ಬೆನ್ನಿನ ಮತ್ತು ಸೊಂಟದ ಕೀಲುಗಳಲ್ಲಿ ನೋವು, ಸಾಮಾನ್ಯವಾಗಿ ದೀರ್ಘಕಾಲಿಕವಾಗಿರುತ್ತದೆ.

### ಲೂಪಸ್ ಎರಿಥೆಮೆಟೋಸಿಸ್

ಸಣ್ಣ ಕೀಲುಗಳಲ್ಲಿ ನೋವು, ಊತ, ಮುಖದ ಚರ್ಮದ ಮೇಲೆ ಚಿಟ್ಟೆಯಾಕಾರದ ದದ್ದು (ಬಟರ್ ಫ್ಲೈ ರ್‍ಯಾಶ್), ಜ್ವರ ಮೊದಲಾದುವು. ಸ್ವಲ್ಪ ವರ್ಷಗಳ ನಂತರ ಹೃದಯ, ಮೂತ್ರಪಿಂಡ ಮತ್ತು ನರವ್ಯೂಹಕ್ಕೆ ಸಂಬಂಧಿಸಿದ ಲಕ್ಷಣಗಳೂ ಕಾಣಿಸಿಕೊಳ್ಳಬಹುದು.

### ಮಯಸ್ತೇನಿಯ ಗ್ರೇವಿಸ್

ಸ್ನಾಯುಗಳ ದುರ್ಬಲತೆ, ಕಣ್ಣುಗಳ ಮೇಲಿನ ರೆಪ್ಪೆ ಸಹಜ ಸ್ಥಾನದಲ್ಲಿರದೆ ಕೆಳಗೆ ಬಾಗಿದಂತಾಗುವುದು, ನುಂಗಲು ಕಷ್ಟವಾಗುವುದು, ದೃಷ್ಟಿಯಲ್ಲಿ ವ್ಯತ್ಯಯ (ಎರಡು ಚಿತ್ರಗಳು ಕಂಡಂತಾಗುವುದು) ಮೊದಲಾದುವು.

ಇನ್ನೂ ಅನೇಕ ಕಾಯಿಲೆಗಳು ಈ ಪಟ್ಟಿಯಲ್ಲಿದ್ದು, ರೋಗ ಲಕ್ಷಣಗಳ ಬಗ್ಗೆ ವಿವರ, ಎಕ್ಸರೇ, ಎಂಆರ್‌ಐ ಮತ್ತು ಕೆಲವು ರಕ್ತ ತಪಾಸಣೆಗಳು ಇಂತಹದ್ದೇ ಕಾಯಿಲೆ ಎಂದು ನಿರ್ದಿಷ್ಟವಾಗಿ ಪತ್ತೆ ಹಚ್ಚಲು ನೆರವಾಗುತ್ತವೆ.